ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/9457/2019-20** **ದಿನಾಂಕ:** 26.03.2020

## <u>ಸುತ್ತೋಲೆ</u>

**ವಿಷಯ:** ಕೋವಿಡ್-19 ವೈರಾಣು ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ಸಾಮಾಜಿಕ ಅಂತರವನ್ನು ಪಾಲಿಸುವ ನಿಟ್ಟಿನಲ್ಲಿ ಕವಿಪ್ರನಿನಿಯ ಎಲ್ಲಾ ಅಧಿಕಾರಿ/ನೌಕರರಿಗೆ ದಿನಾಂಕ: 14.04.2020 ರವರೆಗೆ ಕಚೇರಿಗೆ ಬರುವುದರಿಂದ ವಿನಾಯಿತಿ ನೀಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 123 ಡಿಬಿಎಂ 2020 ದಿನಾಂಕ: 23.03.2020.
2. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ 7 ಸೇನಿಎಫ್ 2020, ದಿನಾಂಕ: 23.03.2020.
3. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು 54 ಸಿಜಿಎಂ 2020 ದಿನಾಂಕ: 23.03.2020.
4. ಈ ಕಚೇರಿಯ ದಿನಾಂಕ: 24.03.2019 ರ ಸಮಸಂಖ್ಯೆಯ ಸುತ್ತೋಲೆ.
5. ಗೃಹ ಕಾರ್ಯದರ್ಶಿ, ಭಾರತ ಸರ್ಕಾರ, ನವದೆಹಲಿ ರವರ ಆದೇಶ ಸಂಖ್ಯೆ: 40-3/2020-ಡಿಎಂ-ಐ(ಎ), ದಿನಾಂಕ: 24.03.2020.
6. ಉಪ ಕಾರ್ಯದರ್ಶಿ, ಇಂಧನ ಸಚಿವಾಲಯ, ಭಾರತ ಸರ್ಕಾರ ರವರ ಅಧಿಕೃತ ಜ್ಞಾಪನಾ ಸಂಖ್ಯೆ: 2-18/7/2019/ಆಡಳಿತ-II, ದಿನಾಂಕ: 25.03.2020.
7. ಕರ್ನಾಟಕ ಸರ್ಕಾರದ ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಕಾಇ 170 ಸ್ವೀಮರ 2018(ಭಾ-7)) ದಿನಾಂಕ: 24.03.2020.

*****

ನಿಗಮದ ಉಲ್ಲೇಖ-4 ರ ಸುತ್ತೋಲೆಯಲ್ಲಿ, ಕೋವಿಡ್-19 ವೈರಾಣು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ನಿಗಮದ ಅಧಿಕಾರಿ/ನೌಕರರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 24.03.2020 ರಿಂದ ದಿನಾಂಕ: 31.03.2020 ರವರೆಗೆ ಕಚೇರಿಗೆ ಬರುವುದರಿಂದ ವಿನಾಯಿತಿ ನೀಡಲಾಗಿತ್ತು.

ಮುಂದುವರೆದು, ಕೇಂದ್ರ ಸರ್ಕಾರವು, ಕೋವಿಡ್-19 ವೈರಾಣು ತೀವ್ರವಾಗಿ ಹರಡುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ದೇಶದಾದ್ಯಂತ 25.03.2020 ರಿಂದ 21 ದಿನಗಳ ವರೆಗೆ ಉಲ್ಲೇಖ-5 ರ ಆದೇಶದಲ್ಲಿ 'ಲಾಕ್ ಡೌನ್' ಘೋಷಿಸಿರುವ ಹಿನ್ನಲೆಯಲ್ಲಿ, ಈ ಕೆಳಕಂಡ ಸೂಚನೆಗಳನ್ನು ಪಾಲಿಸುವುದು:

1. ದಿನಾಂಕ: 24.03.2020 ರಿಂದ ದಿನಾಂಕ: 31.03.2020 ರವರೆಗೆ ಕಚೇರಿಗೆ ಬರುವುದರಿಂದ ವಿನಾಯಿತಿ ನೀಡಿರುವುದನ್ನು, ದಿನಾಂಕ: 14.04.2020 ರವರೆಗೆ ವಿಸ್ತರಿಸಲಾಗಿದೆ.

2. ಎಲ್ಲಾ ಅಧಿಕಾರಿ/ನೌಕರರು ಮನೆಯಿಂದಲೇ ಕಾರ್ಯನಿರ್ವಹಿಸುವುದು ಹಾಗೂ ದೂರವಾಣಿ ಮತ್ತು ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳ ಸಂವಹನದಲ್ಲಿ ಲಭ್ಯವಿರಬೇಕು.

3. ಹಾಜರಾತಿಯಿಂದ ವಿನಾಯಿತಿ ನೀಡಲ್ಪಟ್ಟ ಎಲ್ಲಾ ಅಧಿಕಾರಿ/ನೌಕರರು, ಕಚೇರಿಯ ಮುಖ್ಯಸ್ಥರು ಬಯಸಿದಲ್ಲಿ ಯಾವುದೇ ಕಾರಣ ನೀಡದೆ ಕಚೇರಿಗೆ ಹಾಜರಾಗತಕ್ಕದ್ದು ಮತ್ತು ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

4. ಕಚೇರಿಯ ತುರ್ತು ಕಾರ್ಯಗಳಲ್ಲಿ ಯಾವುದೇ ಅಡೆತಡೆಯಾಗದಂತೆ ಸಂಬಂಧಿಸಿದ ಕಚೇರಿಯ ಮುಖ್ಯಸ್ಥರು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

5. ನಿಗಮದಲ್ಲಿ ವಿವಿಧ ಏಜೆನ್ಸಿ ಮೂಲಕ ಪಡೆದಿರುವ ಗುತ್ತಿಗೆ ಕಾರ್ಮಿಕರನ್ನು ಲಾಕ್ ಡೌನ್ ಅವಧಿಯಲ್ಲಿ ಕರ್ತವ್ಯದಲ್ಲಿದ್ದಾರೆಂದು ಸಂಬಂಧಿಸಿದ ಏಜೆನ್ಸಿಯವರು ಪರಿಗಣಿಸಬೇಕಿರುತ್ತದೆ. ಇದಲ್ಲದೆ ಅವರನ್ನು ಕೆಲಸದಿಂದ ವಜಾಗೊಳಿಸಬಾರದು ಹಾಗೂ ಸದರಿರವರಿಗೆ ಏಜೆನ್ಸಿಯವರು ಯಾವುದೇ ವೇತನವನ್ನು ಕಡಿತಗೊಳಿಸದಿರುವ ಬಗ್ಗೆ ಸಂಬಂಧಿಸಿದ ಕಚೇರಿಯ ಮುಖ್ಯಸ್ಥರು ದೃಢಪಡಿಸಿಕೊಳ್ಳುವುದು.

6. ಕರ್ನಾಟಕ ರಾಜ್ಯದ ಪೊಲೀಸ್ ಇಲಾಖೆಯು ವಿದ್ಯುಚ್ಛಕ್ತಿ ಪ್ರಸರಣ ಹಾಗೂ ವಿತರಣಾ ಕಂಪನಿಗಳಲ್ಲಿನ ಅಧಿಕಾರಿ/ನೌಕರರು ಕಾರ್ಯನಿರ್ವಹಿಸಲು ಅಡೆತಡೆಯಾಗದಿರಲು, ಚಲನವಲನಕ್ಕಾಗಿ ವಾಹನಗಳಿಗೆ ಮತ್ತು ಅಧಿಕಾರಿ/ನೌಕರರಿಗೂ ಸಹಾ 'ಪಾಸ್' ನೀಡುವ ವ್ಯವಸ್ಥೆಯನ್ನು ಕಲ್ಪಿಸಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಕಚೇರಿಯ ಮುಖ್ಯಸ್ಥರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಮತ್ತು ವಾಹನಗಳಿಗೆ 'ಪಾಸ್' ಅನ್ನು ಸಂಬಂಧಪಟ್ಟ ಪೊಲೀಸ್ ಇಲಾಖೆಯಿಂದ ಪಡೆಯಲು ಕ್ರಮವಹಿಸುವುದು.

ಇನ್ನುಳಿದಂತೆ, ದಿನಾಂಕ: 24.03.2020 ರ ಉಲ್ಲೇಖ-4 ರ ಸುತ್ತೋಲೆಯಲ್ಲಿನ ಇತರೆ ಅಂಶಗಳಿಗೆ ಯಾವುದೇ ಬದಲಾವಣೆ ಇರುವುದಿಲ್ಲ.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ
ಇವರಿಂದ ಅನುಮೋದಿಸಲ್ಪಟ್ಟಿರುತ್ತದೆ"

24/3/2020

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

<u>ಗೆ:</u>

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.

5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.